# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ದಿನಾಂಕ: 07–05–2018**

## ಪತ್ರಿಕಾ ಪ್ರಕಟಣೆಗಾಗಿ

**ವಿಜಯಪುರ:** ಅನುಭವದ ನೆಲೆಯಿಂದ ಉತ್ಪತ್ತಿಯಾಗುವ ಲೇಖಕನ ಅಧ್ಯಯನಶೀಲ ಬರವಣಿಗೆ ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ನೈಜತೆಯಿಂದ ಮೂಡಿ ಬರುವ ಮೂಲಕ ಸಫಲತೆ ಹೊಂದುವುದು ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಲ್.ಆರ್. ನಾಯಕ ಅಭಿಪ್ರಾಯಪಟ್ಟರು.

ಮಹಿಳಾ ವಿವಿ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಸಭಾ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಅವರ 'ರೂಪಾಂತರ' ಕವನ ಸಂಕಲನ ಮತ್ತು 'ವ್ಯಕ್ತಿತ್ವ ವಿಕಸನ ಮತ್ತು ಶಿಕ್ಷಣ' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸೃಜನಶೀಲ ಬರವಣಿಗೆಯಲ್ಲಿ ಕ್ರಿಯಾಶೀಲತೆಗೆ ಆದ್ಯತೆ ನೀಡಿದರೆ, ಪಠ್ಯಾಧಾರಿತ ಬರವಣಿಗೆಯಲ್ಲಿ ಅಧ್ಯಯನ ಶೀಲತೆ, ಭಾಷೆ, ನಿರೂಪಣೆ ಮತ್ತು ಶಿಕ್ಷಣ ಕ್ರಮಗಳು ಮುಖ್ಯವಾಗುತ್ತವೆ ಎಂದು ಅವರು ತಿಳಿಸಿದರು.

'ವ್ಯಕ್ತಿತ್ವ ವಿಕಸನ ಮತ್ತು ಶಿಕ್ಷಣ' ಕೃತಿಯನ್ನು ಪರಿಚಯಿಸಿದ ಡಾ.ಎಂ.ಪಿ. ಬಳಿಗಾರ ಮಾತನಾಡಿ, ಪ್ರಸ್ತುತ ಕೃತಿ ವ್ಯಕ್ತಿತ್ವ ವಿಕಸನದ ಆಧುನಿಕ ಆಯಾಮಗಳನ್ನು ಒಳಗೊಂಡಿದೆ. ಸರಳ ಭಾಷೆ, ನಿಖರ ಮಾಹಿತಿಯ ಮೂಲಕ ಈ ಕೃತಿಯು ಅಪರೂಪವಾಗಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ ಎಂದರು.

'ರೂಪಾಂತ' ಕವನ ಸಂಕಲನದ ಕುರಿತು ಡಾ.ಆನಂದ ಕುಲಕರ್ಣಿ ಮಾತನಾಡಿ, ಲೇಖಕ ಡಾ.ಶಿಂಧೆ ಅವರ ಬರಹವು ಜಾತಿ, ಮತ, ಪಂಥಗಳಿಂದಾಚೆ ಸಾಗಿ ಮಾನವೀಯ ಮೌಲ್ಯಗಳನ್ನು ಆಧರಿಸಿದೆ. ಮಹಿಳಾ ಬದುಕು, ಯುವಜನತೆ, ಆಧುನಿಕ ಜೀವನದ ಭರಾಟೆಯನ್ನು ಅತ್ಯಂತ ಕ್ರಿಯಾಶೀಲವಾಗಿ ತಮ್ಮ ಕವನ ಸಂಕಲನದಲ್ಲಿ ನಿರೂಪಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಹೇಮಂತಕುಮಾರ, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿನಿಯರು, ಸ್ಥಳೀಯ ಸಾಹಿತಿಗಳು, ಕಲಾವಿದರು ಉಪಸ್ಥಿತರಿದ್ದರು. ಲೇಖಕ ಡಾ.ವಿಷ್ಣು ಶಿಂಧೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಭಾಸ್ ಕಣ್ಣೂರ ನಿರೂಪಿಸಿದರು. ನೀಲಮ್ಮ ಪತ್ತಣ್ಣವರ ವಂದಿಸಿದರು.

**ಫೋಟೋ ಕ್ಯಾಪ್ಷನ್:**

1) ಮಹಿಳಾ ವಿವಿ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಸಭಾ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಅವರ 'ರೂಪಾಂತರ' ಕವನ ಸಂಕಲನ ಮತ್ತು 'ವ್ಯಕ್ತಿತ್ವ ವಿಕಸನ ಮತ್ತು ಶಿಕ್ಷಣ' ಕೃತಿಯನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಲ್.ಆರ್. ನಾಯಕ ಬಿಡುಗಡೆ ಮಾಡಿದರು.

2) ಮಹಿಳಾ ವಿವಿ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಸಭಾ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಅವರ 'ರೂಪಾಂತರ' ಕವನ ಸಂಕಲನ ಮತ್ತು 'ವ್ಯಕ್ತಿತ್ವ ವಿಕಸನ ಮತ್ತು ಶಿಕ್ಷಣ' ಕೃತಿಯನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಲ್.ಆರ್. ನಾಯಕ ಬಿಡುಗಡೆ ಮಾಡಿ ಮಾತನಾಡಿದರು.

3) ಮಹಿಳಾ ವಿವಿ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಸಭಾ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಅವರ 'ರೂಪಾಂತರ' ಕವನ ಸಂಕಲನ ಮತ್ತು 'ವ್ಯಕ್ತಿತ್ವ ವಿಕಸನ ಮತ್ತು ಶಿಕ್ಷಣ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಡಾ.ಆನಂದ ಕುಲಕರ್ಣಿ ಮಾತನಾಡಿದರು.

